




ಡಾ. ಎಸ್. ರಾಮಮೂರ್ತಿ

# 19-7-2012ರಿಂದ 25-7-2012ರವರೆಗೆ



**ಮೇಷ**

ವಾರದ ಆರಂಭದಲ್ಲಿ ಚಂಚಲತೆ. ಕೋಪದ ಮಾತುಗಳಿಂದ ಕಲಹ. ಉದ್ಯೋಗದಲ್ಲಿ ತಪ್ಪುಗಳಾಗುವಿಕೆ. ಲೇವಾದೇವಿಗಳಲ್ಲಿ ನಷ್ಟ. ಪೆಟ್ಟಾಗುವ ಸಂಭವ. ವಾರದ ಮಧ್ಯಭಾಗದಿಂದ ಚೇತರಿಕೆ. ದೃಢ ನಿರ್ಧಾರಗಳನ್ನು ತೆಗೆದುಕೊಳ್ಳುವಿಕೆ. ಕೆಲಸ ಕಾರ್ಯಗಳಲ್ಲಿ ಪ್ರಗತಿ ಕಂಡುಬರುವುದು. ವ್ಯಾಪಾರದಲ್ಲಿ ಲಾಭ. ಆಪ್ತರ ಆಗಮನ. ಶುಭದಿನ: 24; ಗಣಪತಿ, ದತ್ತಾತ್ರೇಯ ಅಷ್ಟೋತ್ತರ ಪಠಿಸಿ



**ವೃಷಭ**

ವಾರದ ಆರಂಭದಲ್ಲಿ ಅನುಕೂಲ. ಅಲ್ಪಶ್ರಮದಿಂದ ಕೆಲಸ ಕಾರ್ಯಗಳು ಸಫಲವಾಗುವಿಕೆ. ವ್ಯಾಪಾರದಲ್ಲಿ ಲಾಭ. ವಿಶೇಷ ಸುದ್ದಿಗಳ ಆಗಮನ. ಮಿತ್ರರಿಂದ ಸಹಕಾರ. ಶುಭ ಕಾರ್ಯ ಯೋಜನೆ. ವಾರದ ಮಧ್ಯಭಾಗದಲ್ಲಿ ಭಯ. ಅನಾರೋಗ್ಯ. ಕುಟುಂಬದಲ್ಲಿ ಭಿನ್ನಾಭಿಪ್ರಾಯ. ನಿರೀಕ್ಷೆಗೆ ವಿರುದ್ಧ ಫಲ. ವಾರಾಂತ್ಯದಲ್ಲಿ ಅನುಕೂಲ. ಶುಭದಿನ: 20; ಲಕ್ಷ್ಮೀ, ವಿಷ್ಣು ಅಷ್ಟೋತ್ತರ ಪಠಿಸಿ



**ಮಿಥುನ**

ವಾರದ ಮಧ್ಯಭಾಗದವರೆಗೂ ಅನುಕೂಲ. ಸಂತಸ, ಕಾರ್ಯಸಿದ್ಧಿ. ಕ್ರಯ ವಿಕ್ರಯಗಳಲ್ಲಿ ಲಾಭ. ನಿರಾತಂಕದ ಪ್ರಯಾಣ. ಪ್ರೀತಿ ಪಾತ್ರರೊಂದಿಗೆ ಸಮಾಲೋಚನೆ. ಹಿತಕರ ಸಂದೇಶ. ಗೌರವ ಪ್ರಾಪ್ತಿ. ವಾರಾಂತ್ಯದಲ್ಲಿ ಇಲ್ಲ ಸಲ್ಲದ ಚಿಂತೆ, ಆಲಸ್ಯ. ಉದ್ಯೋಗ, ವ್ಯಾಪಾರದಲ್ಲಿ ಅಶಾಂತಿ, ಶತ್ರುಭೀತಿ. ಅಧಿಕ ಶ್ರಮ. ಅನಾರೋಗ್ಯ. ಶುಭದಿನ: 21; ಗಣಪತಿ, ಲಕ್ಷ್ಮೀ ಅಷ್ಟೋತ್ತರ ಪಠಿಸಿ



**ಕಟಕ**

ನಿರೀಕ್ಷಿಸಿದಂತೆ ಕಾರ್ಯಗಳಲ್ಲಿ ಅಭಿವೃದ್ಧಿ. ವ್ಯಾಪಾರ ವಹಿವಾಟುಗಳಲ್ಲಿ ಹೆಚ್ಚಿನ ಲಾಭ. ಪ್ರೀತಿ ಪಾತ್ರರ ಆಗಮನ. ಗುರುಹಿರಿಯರಿಂದ ಸಲಹೆ. ಅಧ್ಯಯನದಲ್ಲಿ ಮುನ್ನಡೆ. ತಂಟೆತಕರಾರುಗಳಲ್ಲಿ ಜಯ. ವಾಹನ ಯಂತ್ರೋಪಕರಣಗಳು ಸರಾಗವಾಗಿ ನಡೆಯುವುದು. ನವೀಕರಣ ಯೋಜನೆ. ದೇವತಾ ಕಾರ್ಯಗಳಲ್ಲಿ ಭಾಗವಹಿಸುವಿಕೆ. ಶುಭದಿನ: 24; ಗಣಪತಿ, ದುರ್ಗಾ ಅಷ್ಟೋತ್ತರ ಪಠಿಸಿ



**ಸಿಂಹ**

ವಾರದ ಆರಂಭದಲ್ಲಿ ಮಿತಿಯಿಂದ ಖರ್ಚು. ವಿರೋಧಿಗಳಿಂದ ಒತ್ತಡ. ಉದ್ಯೋಗದಲ್ಲಿ ಸಮಸ್ಯೆ. ಅಕಾಲ ಭೋಜನ, ಅಧಿಕಶ್ರಮ. ವಾರದ ಮಧ್ಯಭಾಗದಿಂದ ಸಮಾಧಾನ. ದೃಢ ಮನಸ್ಸು. ಕೆಲಸ ಕಾರ್ಯಗಳಲ್ಲಿ ಪ್ರಗತಿ. ಕ್ರಯ ವಿಕ್ರಯ, ವ್ಯವಹಾರದಲ್ಲಿ ಲಾಭ. ಹಿತಕರ ಸುದ್ದಿ. ಪ್ರಯಾಣ ಸೌಖ್ಯ. ಧೈರ್ಯ ಪ್ರಾಪ್ತಿ. ಶುಭದಿನ: 22; ಶಿವ, ಪಾರ್ವತಿ ಅಷ್ಟೋತ್ತರ ಪಠಿಸಿ



**ಕನ್ಯಾ**

ವಾರದ ಆರಂಭದಲ್ಲಿ ಸಂತೋಷ. ಬಂಧುಗಳಿಂದ ಪ್ರಶಂಸೆ. ಅಲ್ಪ ಶ್ರಮದಿಂದ ಕಾರ್ಯ ಸಾಧನೆ. ಕ್ರಯ ವಿಕ್ರಯಗಳಿಂದ ಅಪೇಕ್ಷಿತ ಲಾಭ. ಸಮಾಧಾನ ತರುವ ಸಂದೇಶ. ವಾರದ ಮಧ್ಯಭಾಗದಲ್ಲಿ ಚಂಚಲ ಮನಸ್ಸು. ಪತಿ ಪತ್ನಿಯರಲ್ಲಿ ಕಲಹ. ವಾಹನಗಳಿಂದ ತೊಂದರೆ. ಉದ್ಯೋಗದಲ್ಲಿ ಅಶಾಂತಿ. ವಾರಾಂತ್ಯದಲ್ಲಿ ಅನುಕೂಲ ಪ್ರಾಪ್ತಿ. ಶುಭದಿನ: 20; ಗಣಪತಿ, ಲಕ್ಷ್ಮೀ ಅಷ್ಟೋತ್ತರ ಪಠಿಸಿ



**ತುಲಾ**

ವಾರದ ಮಧ್ಯಭಾಗದವರೆಗೂ ಸುಖ. ಹಿತಕರ ಘಟನೆಗಳು. ಪ್ರೀತಿ ಪಾತ್ರರ ಹಾಗೂ ವಿಶೇಷ ಸಂದೇಶಗಳ ಆಗಮನ. ಕೆಲಸ ಕಾರ್ಯಗಳಲ್ಲಿ ಪೂರ್ಣ ಸಫಲತೆ. ಕ್ರಯ ವಿಕ್ರಯ, ಏಜೆನ್ಸಿ, ಗುತ್ತಿಗೆ ಕಾರ್ಯಗಳಲ್ಲಿ ಲಾಭ. ಪ್ರಯಾಣ ಸೌಖ್ಯ. ವಾರಾಂತ್ಯದಲ್ಲಿ ದುಡುಕಿನಿಂದ ತಪ್ಪಾಗುವಿಕೆ. ವ್ಯವಹಾರದಲ್ಲಿ ನಷ್ಟ, ಕಷ್ಟಗಳ ಸೇರ್ಪಡೆ. ಶುಭದಿನ: 21; ಲಕ್ಷ್ಮೀ, ವಿಷ್ಣು ಅಷ್ಟೋತ್ತರ ಪಠಿಸಿ



**ವೃಶ್ಚಿಕ**

ವಾರದ ಆರಂಭದಲ್ಲಿ ಕೆಲಸ ಕಾರ್ಯಗಳಲ್ಲಿ ಸಮಸ್ಯೆ. ವ್ಯಾಪಾರದಲ್ಲಿ ನಿರೀಕ್ಷಿತ ಲಾಭದ ಕೊರತೆ. ಸಂದೇಶಗಳ ವಿಳಂಬ. ಲೆಕ್ಕ ಪತ್ರಗಳಲ್ಲಿ ತಪ್ಪುಗಳಾಗಿ ಬೇಸರ. ವಿಪರೀತ ಶ್ರಮ. ವಾರದ ಮಧ್ಯಭಾಗದಿಂದ ಅನುಕೂಲ. ಕುಟುಂಬದಲ್ಲಿ ಒಮ್ಮತ. ಬರಬೇಕಾಗಿದ್ದ ಹಣ ಬರುವುದು. ಉದ್ಯೋಗದಲ್ಲಿ ಪ್ರಶಂಸೆ. ಲೇವಾದೇವಿಗಳಲ್ಲಿ ಲಾಭ ವೃದ್ಧಿ. ಶುಭದಿನ: 23; ಶಿವ, ಪಾರ್ವತಿ ಅಷ್ಟೋತ್ತರ ಪಠಿಸಿ



**ಧನಸ್ಸು**

ವಾರದ ಆರಂಭದಲ್ಲಿ ಅಶಾಂತಿ. ಮಕ್ಕಳಿಂದ ಒತ್ತಡ. ಕೆಲಸ ಕಾರ್ಯಗಳಲ್ಲಿ ಹಿನ್ನಡೆ. ವ್ಯಾಪಾರದಲ್ಲಿ ನಷ್ಟ. ಅಪರಿಚಿತರಿಂದ ತೊಂದರೆ. ವಾರದ ಮಧ್ಯಭಾಗದಿಂದ ಸೌಖ್ಯ. ಹಿತೈಷಿಗಳಿಂದ ಸಹಾಯ. ಸಂದೇಶಗಳಿಂದ ಸಂತಸ. ಉದ್ಯೋಗದಲ್ಲಿ ಸಮಾಧಾನ. ಹಿರಿಯರಿಂದ ಸಹಕಾರ. ದೈವಿಕ ಕಾರ್ಯಾಸಕ್ತಿ. ಆರೋಗ್ಯ ಸುಧಾರಣೆ. ಶುಭದಿನ: 24; ಗಣಪತಿ, ಪಾರ್ವತಿ ಅಷ್ಟೋತ್ತರ ಪಠಿಸಿ



**ಮಕರ**

ವಾರದ ಆರಂಭದಲ್ಲಿ ಸಂತೋಷ. ಆಪ್ತರೊಡನೆ ಪ್ರಯಾಣ. ಉದ್ಯೋಗದಲ್ಲಿ ಪ್ರಗತಿ. ಹಿತಕರ ಸಂದೇಶಗಳು. ನವೀಕರಣ ಕಾರ್ಯಗಳಲ್ಲಿ ಸಫಲತೆ. ವಾರದ ಮಧ್ಯಭಾಗದಲ್ಲಿ ಆತಂಕ. ಆರೋಗ್ಯ ವ್ಯತ್ಯಯ, ಲೆಕ್ಕ ಪತ್ರಗಳಲ್ಲಿ ತಪ್ಪಾಗುವಿಕೆ. ಕಾರ್ಯ ಹಿನ್ನಡೆ. ಲೇವಾದೇವಿಗಳಲ್ಲಿ ಪೈಪೋಟಿಯಿಂದ ನಷ್ಟ. ವಾರಾಂತ್ಯದಲ್ಲಿ ಸುಧಾರಣೆ. ಶುಭದಿನ: 20; ಲಕ್ಷ್ಮೀ, ವಿಷ್ಣು ಅಷ್ಟೋತ್ತರ ಪಠಿಸಿ



**ಕುಂಭ**

ವಾರದ ಮಧ್ಯಭಾಗದವರೆಗೂ ಸಮಾಧಾನ. ಇಷ್ಟಾರ್ಥ ಸಿದ್ಧಿ. ಶ್ರಮವಿಲ್ಲದೆ ಕೆಲಸ ಕಾರ್ಯಗಳಲ್ಲಿ ಸಫಲತೆ. ವ್ಯಾಪಾರ, ವೃತ್ತಿ, ಒಪ್ಪಂದ ವ್ಯವಹಾರಗಳಲ್ಲಿ ಲಾಭ. ಪ್ರೀತಿ ಪಾತ್ರರ ಭೇಟಿ. ಸಂತಸದ ವಾರ್ತೆ. ವಾಹನ ಯಂತ್ರೋಪಕರಣಗಳು ಸರಾಗವಾಗಿ ನಡೆಯುವುದು. ವಾರಾಂತ್ಯದಲ್ಲಿ ಒತ್ತಡ. ಆರೋಗ್ಯ ವ್ಯತ್ಯಯ, ವೃತ್ತಿ ನಷ್ಟ. ಶುಭದಿನ: 21; ಗಣಪತಿ, ಲಕ್ಷ್ಮೀ ಅಷ್ಟೋತ್ತರ ಪಠಿಸಿ



**ಮೀನ**

ವಾರದ ಆರಂಭದಲ್ಲಿ ಚಿಂತೆ. ಮಕ್ಕಳೊಂದಿಗೆ ಕಲಹ. ಚಂಚಲ ಮನಸ್ಸಿನಿಂದ ನಿರ್ಧಾರಗಳನ್ನು ತೆಗೆದುಕೊಳ್ಳಲು ಹಿಂಜರಿಕೆ. ಉದ್ಯೋಗದಲ್ಲಿ ಅಸಮಾಧಾನ. ವ್ಯಾಪಾರದಲ್ಲಿ ಹಿನ್ನಡೆ. ವಾರದ ಮಧ್ಯಭಾಗದಿಂದ ಅನುಕೂಲ. ಅಪೇಕ್ಷೆಯಂತೆ ಕಾರ್ಯ ಸಿದ್ಧಿ. ಕ್ರಯ ವಿಕ್ರಯದಲ್ಲಿ ಲಾಭ. ಆಪ್ತರ ಸಹಾಯ, ಹಿತ ಸುದ್ದಿ. ಪ್ರಯಾಣ ಸೌಖ್ಯ. ಶುಭದಿನ: 24; ಶಿವ, ಪಾರ್ವತಿ ಅಷ್ಟೋತ್ತರ ಪಠಿಸಿ